**ದಿನಾಂಕಃ 03.08.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ**

ಇರುವುದಿಲ್ಲ.

**ಪಾಟೀಸವಾಲುಃ 11 ನೇ ಪ್ರತಿವಾದಿ ಪರ ಶ್ರೀ ಬಿ ಕೆ ವಿ ವಕೀಲರಿಂದಃ**

ನನ್ನ ಹೆಸರನ್ನು ಪೂರ್ತಿಯಾಗಿ ಸಣ್ಣತಾಯಿ ಭಾರತಿ ಎಂದು ಕರೆಯುತ್ತಾರೆ. ಕೇಸನ್ನು ನಾವೇ ನಮ್ಮ ಅಣ್ಣನ ವಿರುದ್ಧ ಹಾಕಿದ್ದೇವೆ. ನಮ್ಮನ್ನು ವಿವಾಹ ಮಾಡಿಕೊಟ್ಟಿರುವುದಿಲ್ಲ, ಆಸ್ತಿಯಲ್ಲಿ ಭಾಗ ಕೇಳಿದ್ದೇವೆ. ದಾವಾ ಆಸ್ತಿ ಪಿತ್ರಾರ್ಜಿತ ಆಸ್ತಿ ಎನ್ನುವ ಬಗ್ಗೆ ನ್ಯಾಯಾಲಯದಲ್ಲಿ ದಾಖಲೆ ಹಾಜರುಪಡಿಸಿದ್ದೇವೆ. ದಾವೆಯನ್ನು ಎರಡು ಆಸ್ತಿಗಳ ಮೇಲೆ ಸಲ್ಲಿಸಲಾಗಿದೆ. ಆಸ್ತಿಯ ವಿಸ್ತೀರ್ಣವನ್ನು ಹಾಗೂ ಚೆಕ್ಕುಬಂಧಿಯನ್ನು ನನಗೆ ಹೇಳಲಾಗುವುದಿಲ್ಲ. ಸಾಕಷ್ಟು ಹಣ ಖರ್ಚುಮಾಡಿ ನಮ್ಮ ವಿವಾಹವನ್ನು ಮಾಡಿದ್ದಾರೆ, ನಾವು ಸುಳ್ಳು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ಈ ಹಿಂದೆಯೇ ಕುಟುಂಬದಲ್ಲಿ ಬಾಯಿಮಾತಿನ ವಿಭಾಗವಾಗಿರುತ್ತದೆ ಎಂದರೆ ಸುಳ್ಳು. ಆ ಪ್ರಕಾರವಾಗಿ ಎಲ್ಲ ಆಸ್ತಿಗಳು ಹಂಚಿಕೆಯಾಗಿ ಅವರ ಸ್ವಯಾರ್ಜಿತ ಆಸ್ತಿಗಳನ್ನು ಸೇರಿಸಲಾಗಿದೆ ಎಂದರೆ ಸುಳ್ಳು. 11 ನೇ ಪ್ರತಿವಾದಿ ಅವರು ಕೊಂಡುಕೊಂಡ ಆಸ್ತಿಯ ಸ್ವಾಧೀನದಲ್ಲಿದ್ದಾರೆ ಎಂದರೆ ಇರಬಹುದೇನೋ ನಮಗೆ ಗೊತ್ತಿಲ್ಲ, ಆದರೆ ನಾವು ಕಿರಿಯ ಹೆಂಡತಿಯ ಮಕ್ಕಳು, ನಮಗೆ ಆಸ್ತಿಯಲ್ಲಿ ಭಾಗ ಬೇಕಾಗಿದೆ. ಹಿರಿಯ ಹೆಂಡತಿಯ ಮಕ್ಕಳು ಮಾರಿರಬಹುದೇನೋ ಗೊತ್ತಿಲ್ಲ.
(ವಕೀಲರ ಕೋರಿಕೆ ಮೇರೆಗೆ ಮುಂದುವರಿದ ಪಾಟೀಸವಾಲಿಗೆ ಸಮಯ ನೀಡಿದೆ)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದಂತೆ ಗಣಕೀಕರಣಗೊಳಿಸಿ ಮುದ್ರಿಸಲಾಯಿತು.)

ಓ ಹೇ ಕೇ ಸರಿ ಇದೆ

(ದೇವಾನಂದ)

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ

ನ್ಯಾಯಾಧೀಶರು, ಚನ್ನರಾಯಪಟ್ಟಣ